ಆ) ಪಿ.ಡಬ್ಲ್ಯೂ.ಡಿ. ರಸ್ತೆಗಳು ನದುರಸ್ತಿಯಲ್ಲಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ;

ಇ) ತಕ್ಷಣ ರಸ್ತೆಗಳ ದುರಸ್ತಿ, ಕಾಮಗಾರಿ, ಹೊಂಡ ಮುಚ್ಚುವುದು, ಮರು ಡಾಂಬರು ಹಾಕುವುದು ಇತ್ಯಾದಿಗಳಿಗೆ ಹಣ ಬಿಡುಗಡೆ ಮಾಡಲಾಗುವುದೇ ?

ಶ್ರೀ ಕೆ.ಹೆಚ್. ರಂಗನಾಥ್, (ಲೋಕೋಪಯೋಗಿ ಸಚಿವರು):–

ಆ) ರಸ್ತೆಗಳಿಗೆ 1992-93ನೇ ಸಾಲಿನಲ್ಲಿ ನಿಗದಿತವಾಗಿರುವ ಅನುದಾನ ಹಾಗೂ ವೆಚ್ಚದ ವಿವರ ಕೆಳಕಂಡಂತಿದೆ:–

	ನಿಗದಿತವಾಗಿರುವ ಅನುದಾನ	ಡಿಸೆಂಬರ್ 92 ರಿಂದ 93ರವರೆಗೆ ಆಗಿರುವ ವೆಚ್ಚ
	(ಲಕ್ಷ ರೂ.ಗಳಲ್ಲಿ)	
ಯೋಜನೆ	351.00	555.52
ಯೋಜನೇತರ	4894.59	3096.31
	5395.59	3651.83

ಆ) ಲೋಕೋಪಯೋಗಿ ರಸ್ತೆಗಳಲ್ಲಿ ಸಾಮಾನ್ಯವಾಗಿ ಸಂಚಾರಕ್ಕೆ ಅಡಚಣೆ ಆಗುವಷ್ಟು ಮಟ್ಟಿಗೆ ನಾದುರಸ್ತಿಯಲ್ಲಿರುವುದಿಲ್ಲ.

ಇ) ಲೋಕೋಪಯೋಗಿ ಇಲಾಖೆ ರಸ್ತೆಗಳನ್ನು ಲಭ್ಯ ಮಾಡಿರುವ ನಿರ್ವಹಣಾ ಅನುದಾನದಲ್ಲಿ ಸಾಧ್ಯವಾದಷ್ಟು ಮಟ್ಟಿಗೆ ನಿರ್ವಹಿಸಲಾಗುತ್ತಿದೆ. ಹೆಚ್ಚುವರಿ ಅನುದಾನ ಬಿಡುಗಡೆ ಮಾಡುವ ಸಾಧ್ಯತೆ ಇರುವುದಿಲ್ಲ.

ದಿನಾಂಕ 26.2.1993ರ ಚುಕ್ಕೆ ಗುರುತಿನ ಹಾಗೂ ಚುಕ್ಕೆ ಗುರುತಿಲ್ಲದ ಪ್ರಶ್ನೋತ್ತರಗಳು

ರೇಷ್ಮೆ ಗೂಡಿನ ಬೆಲೆಯ ಬಗ್ಗೆ

153(1205): ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ):–

ರೇಷ್ಮೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಆ) ರಾಜ್ಯದಲ್ಲಿ ರೇಷ್ಮೆಗೂಡಿನ ಬೆಲೆ ಕಡಿಮೆಯಾಗಿ ರೈತರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ;

ಆ) ಈ ರೀತಿ ಬೆಲೆ ಕಡಿಮೆಯಾಗಲು ಕಾರಣಗಳೇನು ?

ಇ) ಇದನ್ನು ತಡೆಗಟ್ಟಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು ?

ಡಾ।। ಜಿ. ಪರಮೇಶ್ವರ (ರೇಷ್ಮೆ ರಾಜ್ಯ ಸಚಿವರು):–

ಆ) ಹೌದು.

ಆ) ಆಮದು ಮಾಡಿಕೊಂಡಿರುವ ರೇಷ್ಮೆಯು ಮಾರುಕಟ್ಟೆಯಲ್ಲಿ ದೊರೆಯುತ್ತಿರುವುದರಿಂದ.

ಇ) ಆಮದು ಮಾಡಿಕೊಳ್ಳುವುದನ್ನು ನಿಲ್ಲಿಸಲು ಕೇಂದ್ರ ಸರ್ಕಾರವನ್ನು ಕೋರಲಾಗಿದೆ ಹಾಗೂ ಕೇಂದ್ರ ಜವಳಿ ಮಂತ್ರಿಯವರೊಂದಿಗೆ ಚರ್ಚಿಸಲಾಗಿದೆ. ಇದಕ್ಕನುಗುಣವಾಗಿ ಒಂದು ನಿಯೋಗವನ್ನು

ಕೇಂದ್ರ ಸರ್ಕಾರಕ್ಕೆ ತೆಗೆದುಕೊಂಡು ಹೋಗುವುದಾಗಿ ವಿಧಾನ ಸಭೆಯಲ್ಲಿ ಆಶ್ವಾಸನೆ ನೀಡಲಾಗಿದೆ. ಈ ದಿಶೆಯಲ್ಲಿ ಕೇಂದ್ರದ ಜವಳಿ ಖಾತೆ ಮಂತ್ರಿಯವರು ಪತ್ರ ಬರೆದು ಈ ವಿಷಯವನ್ನು ಪರಿಶೀಲಿಸಲಾಗುತ್ತಿದೆ ಎಂದು ಹೇಳಿದ್ದಾರೆ.

ಹಾಸನದ ಕಿಂಕೋ ಕಾರ್ಖಾನೆ ಕುರಿತು

157 (585): ಶ್ರೀ ಕೆ.ಹೆಚ್. ಹನುಮೇಗೌಡ (ಹಾಸನ):–

ಭಾರಿ ಮತ್ತು ಮಾಧ್ಯಮ ಕೈಗಾರಿಕಾ ಸಚಿವೆಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಹಾಸನದ ಕಿಂಕೋ ಕಾರ್ಖಾನೆಯವರು ಕೆ.ಎಸ್.ಆರ್ ಟಿ.ಸಿ.ಗೆ ಮಹಿಸಿಕೊಡಲು ಸರ್ಕಾರ ನಿರ್ಧರಿಸಿದೆಯೇ;

ಆ) ಈ ನಿರ್ಧಾರ ಕಾರ್ಯಗತವಾಗಲು ಇನ್ನೆಷ್ಟು ಕಾಲಾವಕಾಶ ಬೇಕಾಗುವುದು (ವಿವರ ಕೊಡಿ) ?

ಶ್ರೀಮತಿ ನಾಗಮ್ಮ ಕೇಶವಮೂರ್ತಿ (ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು):–

ಅ) ಈ ವಿಷಯ ಸರ್ಕಾರದ ಪರಿಶೀಲನೆಯಲ್ಲಿ ಇದೆ.

ಆ) ಉದ್ಭವಿಸುವುದಿಲ್ಲ.

ಮೈಸೂರು ನಗರದ ನೆಹರು ಲೋಕದ ಬಗ್ಗೆ

361 (1210): ಶ್ರೀ ಕೆ. ಹರ್ಷಕುಮಾರ ಗೌಡ (ಪಾಮರಾಜ):–

ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಮೈಸೂರು ನಗರದ ಉದ್ದೇಶಿತ ನೆಹರೂ ಲೋಕಕ್ಕೆ ಸೇರಿದ ಪ್ರದೇಶದ ವಿಸ್ತೀರ್ಣವೆಷ್ಟು;

ಆ) ಈ ನೆಹರೂ ಲೋಕಕ್ಕೆ ಸೇರಿದ್ದ ಪ್ರದೇಶದಲ್ಲಿ ಭೂ ಬದಲಾವಣೆ ನೀಡಲಾಗಿರುವ ಜಮೀನು ವಿಸ್ತೀರ್ಣವೆಷ್ಟು;

ಇ) ನೆಹರೂ ಲೋಕದ ಪ್ರದೇಶದಿಂದ ಭೂ ಬದಲಾವಣೆ ಪಡೆದವವುಗಳ ಹೆಸರುಗಳೇನು ?

ಶ್ರೀ ಚೌಡರೆಡ್ಡಿ (ನಗರಾಭಿವೃದ್ಧಿ ಸಚಿವರು):–

ಅ) 4038 ಎಕರೆಗಳು.

ಆ) ಇದುವರೆವಿಗೂ ಯಾವುದೇ ಜಮೀನಿನ ಭೂ ಉಪಯೋಗ ಬದಲಾವಣೆ ಆಗಿರುವುದಿಲ್ಲ.

ಇ) ಯಾರೂ ಇಲ್ಲ.

ಮೈಸೂರು ರೇಷ್ಮೆ ಬಿತ್ತನೆ ವಲಯದ ಅಭಿವೃದ್ಧಿಯ ಬಗ್ಗೆ

363 (668): ಶ್ರೀ ವೈ.ಕೆ. ರಾಮಯ್ಯ (ಕುಣಿಗಲ್):–

ರೇಷ್ಮೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) 1992–93ನೇ ವರ್ಷದಲ್ಲಿ ಮೈಸೂರು ಬಿತ್ತನೆ ವಲಯದಲ್ಲಿ ವಿವಿಧ ಯೋಜನೆಗಳಲ್ಲಿ ರೇಷ್ಮೆ ಇಲಾಖೆಗೆ ಖರ್ಚು ಮಾಡಿದ ಹಣ ಎಷ್ಟು;

ಆ) ಯೋಜನೆಗಳ ಅನುಷ್ಠಾನ ಯಾವ ಹಂತದಲ್ಲಿ ಇದೆ ಮತ್ತು ಯಾವಾಗ ಪೂರ್ಣಗೊಳ್ಳುವುದು ?

ಡಾ।। ಜಿ. ಪರಮೇಶ್ವರ (ರೇಷ್ಮೆ ರಾಜ್ಯ ಸಚಿವರು):–